ಆ) ಹಾಗಿದ್ದಲ್ಲಿ ಸರ್ಕಾರದ ವತಿಯಿಂದ ನಡೆಯುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ಕೆಲಸ ಮಾಡುತ್ತಿರುವ ನೌಕರರ ವೇತನಕ್ಕೆ ಸರಿಸಮಾನ ವೇತನವನ್ನು ಖಾಸಗಿಯವರು ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರಿಗೂ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) : ಅಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಬರುವ ಅನುದಾನಿತ ವಿದ್ಯಾರ್ಥಿನಿಲಯಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಗೌರವಧನ ನೀಡುವ ಸಲುವಾಗಿ ಈ ಕೆಳಕಂಡ ದರಗಳಲ್ಲಿ ಅನುದಾನವನ್ನು ಸಂಬಂಧಪಟ್ಟ ಸಂಸ್ಥೆಗಳಿಗೆ ನೀಡಲಾಗುತ್ತಿದೆ:

1) ವಿದ್ಯಾರ್ಥಿನಿಲಯ - ತಿಂಗಳಿಗೆ ರೂ. 125 ರಂತೆ 12 ತಿಂಗಳುಗಳು
ಮೇಲ್ವಿಚಾರಕರು

2) ಅಡಿಗೆಯವರು - ತಿಂಗಳಿಗೆ ರೂ. 100 ರಂತೆ 12 ತಿಂಗಳುಗಳು

3) ಅಡಿಗೆ ಸಹಾಯಕರು - ತಿಂಗಳಿಗೆ 75 ರಂತೆ 12 ತಿಂಗಳುಗಳು

ಆ) ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯದಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಸರ್ಕಾರಿ ನೌಕರರ ವೇತನಕ್ಕೆ ಸಮನಾಗಿ ವೇತನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ರಾಜ್ಯದಲ್ಲಿ ಮುನ್ಸಿಪಾಲಿಟಿಗಳನ್ನು ಪುರಸಭೆಗಳನ್ನಾಗಿ ಪರಿವರ್ತಿಸುವುದು

244 (89) ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಒಟ್ಟು ಎಷ್ಟು ಪಟ್ಟಣ ಪಂಚಾಯತಿಗಳಿವೆ?

ಆ) ಪುರಸಭೆಗಳನ್ನಾಗಿ ಮಾರ್ಪಾಡು ಮಾಡಲು ಜನಸಂಖ್ಯೆ ಪ್ರಮಾಣ ಎಷ್ಟಿರಬೇಕು?

ಇ) ಜನಸಂಖ್ಯಾಕ್ಕನುಗುಣವಾಗಿ ಈಗಾಗಲೇ ಜನಸಂಖ್ಯೆ ಮೀರಿರುವ ಅಥವಾ ಸಮನಾಗಿರುವ ಪಟ್ಟಣ ಪಂಚಾಯತಿಗಳನ್ನು ಪುರಸಭೆಗಳನ್ನಾಗಿ ಪರಿವರ್ತಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಈ) ಈಗಾಗಲೇ ರಾಜ್ಯದಲ್ಲಿ ಎಷ್ಟು ಪಟ್ಟಣ ಪಂಚಾಯತಿಗಳನ್ನು ಪುರಸಭೆಯನ್ನಾಗಿ ಮಾರ್ಪಾಡು ಮಾಡಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) 89

ಆ) ಕನಿಷ್ಟ 20,000 ಆದರೆ ನಗರ ಸ್ಥಳೀಯ ಸಂಸ್ಥೆಯೊಂದನ್ನು ಪುರಸಭೆಯಾಗಿ ಮಾರ್ಪಾಡಿಸುವಲ್ಲಿ ಈ ಕೆಳಕಂಡ ನಿಬಂಧನೆಗಳನ್ನು ಪೂರೈಸಬೇಕು.

1. ಜನಸಂಖ್ಯೆ ಕನಿಷ್ಟ 20,000ಕ್ಕಿಂತ ಹೆಚ್ಚು, 30,000ಕ್ಕಿಂತ ಕಡಿಮೆ ಇರಬೇಕು.

2. ಪ್ರತಿ ಚದರ ಕಿಲೋಮೀಟರ್ ವಿಸ್ತೀರ್ಣದಲ್ಲಿನ ಜನಸಾಂದ್ರತೆ 1500ಕ್ಕಿಂತ ಹೆಚ್ಚಿರಬೇಕು.

3. ಸ್ಥಳೀಯ ಆಡಳಿತದಿಂದ ಸಂಗ್ರಹಿಸಿದ ಸಂದಾಯವು ಹಿಂದಿನ ಜನಗಣತಿ ವರ್ಷದಲ್ಲಿ ತಲಾ ಆದಾಯ 45ರೂ. ಗಳಂತೆ ಲೆಕ್ಕ ಹಾಕಿದಂತೆ, ಅಥವಾ ಕನಿಷ್ಪ 9 ಲಕ್ಷ ಇವೆರಡರಲ್ಲಿ ಯಾಕಿದು ಗರಿಷ್ಪವೋ ಆ ಮಟ್ಟದಲ್ಲಿರಬೇಕು.

4. ಕೃಷಿಯೇತರ ಚಟುವಟಿಗೆಗಳಲ್ಲಿನ ಉದ್ಯೋಗಾವಕಾಶವು ಒಟ್ಟು ಉದ್ಯೋಗದ ಶೇಕಡ 50ಕ್ಕಿಂತ ಹೆಚ್ಚಿರಬೇಕು.

ಇ) ಪಟ್ಟಣ ಪಂಚಾಯತಿಗಳನ್ನು ಪುರಸಭೆಗಳನ್ನಾಗಿ ಪರಿವರ್ತಿಸುವಲ್ಲಿ, ಕರ್ನಾಟಕ ಪುರಸಭೆ ಅಧಿನಿಯಮ 1964ರ ಪರಿಚ್ಛೇದ 3ರನ್ವಯ ಸಂಬಂಧಿಸಿದ ಜಿಲ್ಲಾಧಿಕಾರಿಯವರಿಂದ ಬರುವ ಪ್ರಸ್ತಾವನೆಗಳನ್ನು ಸರ್ಕಾರ ಪರಿಶೀಲಿಸುತ್ತದೆ.

ಈ) 1993ರ ತರುವಾಯ ಯಾವುದೇ ಪಟ್ಟಣಪಂಚಾಯತಿಗಳನ್ನು ಪುರಸಭೆಯನ್ನಾಗಿ ಪರಿವರ್ತಿಸಿರುವುದಿಲ್ಲ.

ಬೆಳ್ಳಿ ಬೆಳಕು ಕಾರ್ಯಕ್ರಮ

245 (92) ಶ್ರೀ ಅಂಜನಮೂರ್ತಿ(ನೆಲ ಮಂಗಲ):- ಮಾನ್ಯ ಸಮಾಜ ಕಲ್ಯಾಣಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

1. ಕರ್ನಾಟಕ ರಾಜ್ಯಾದ್ಯಂತ ಎಷ್ಟು ಗೊಲ್ಲರಹಟ್ಟಿಗಳು ಬೆಳ್ಳಿಬೆಳಕಿನ ಕಾರ್ಯಕ್ರಮದಲ್ಲಿ ಸೇರಿವೆ; ಈ ಕಾರ್ಯಕ್ರಮಕ್ಕಾಗಿ ಸರ್ಕಾರದಿಂದ ಬಿಡುಗಡೆಯಾದ ಹಣವೆಷ್ಟು;

2. ನೆಲಮಂಗಲ ಮತಕ್ಷೇತ್ರದಲ್ಲಿ ಎಷ್ಟು ಗೊಲ್ಲರಹಟ್ಟಿಗಳು ಈ ಕಾರ್ಯಕ್ರಮದಡಿಯಲ್ಲಿ ಸೇರಿವೆ; ಅವುಗಳ ಅಭಿವೃದ್ಧಿಗೆ ಸರ್ಕಾರದಿಂದ ಬಿಡುಗಡೆಯಾದ ಮೊತ್ತವೆಷ್ಟು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):-

1. ಒಟ್ಟು 15 ಗ್ರಾಮಗಳು 'ಬೆಳ್ಳಿ ಬೆಳಕು' ಕಾರ್ಯಕ್ರಮದಲ್ಲಿ ಸೇರಿವೆ. ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ. 170.49 ಲಕ್ಷ ಬಿಡುಗಡೆ ಮಾಡಲಾಗಿದೆ.

2. ನೆಲಮಂಗಲದ ಮತಕ್ಷೇತ್ರದಲ್ಲಿ ಈ ಕಾರ್ಯಕ್ರಮದಡಿ ಯಾವುದೇ ಗೊಲ್ಲರಹಟ್ಟಿಗಳು ಸೇರಿರುವುದಿಲ್ಲ.

ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಾರ್ಯಕ್ರಮಗಳು

246 (93) ಶ್ರೀ ಅಂಜನಮೂರ್ತಿ (ನೆಲಮಂಗಲ) :- ಮಾನ್ಯ ಮುಖ್ಯ ಮಂತ್ರಿಯವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. 2000-2001ನೇ ಸಾಲಿನಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ಸರ್ಕಾರದಿಂದ ಬಿಡುಗಡೆಯಾದ ಮೊತ್ತವೆಷ್ಟು?